REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 31 । ಸಂಚಿಕೆ : 07 । 22 ಮೇ 2024 । ಬುಧವಾರ । ಪುಟಗಳು : 8 । ಬೆಲೆ : 2/-

## ಶಿವಮೊಗ್ಗದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ರಾಜ್ಯಮಟ್ಟದ ಒಂದು ದಿನದ ತರಬೇತಿ ಶಿಬಿರ




**ಶಿವಮೊಗ್ಗ** : ದಿನಾಂಕ : 19.05.2024ರಂದು ಶಿವಮೊಗ್ಗದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ಒಂದು ದಿನದ ತರಬೇತಿ ಶಿಬಿರವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀ ಕೃಷ್ಣಮೂರ್ತಿ ಭಂಡಾರಿಯವರು ಉದ್ಘಾಟಿಸಿ ಮಾತನಾಡಿ ನಮ್ಮ ಮಹಾಮಂಡಳವು ಈಗಾಗಲೇ ತರಬೇತಿ/ವಿಚಾರ ಸಂಕಿರಣಗಳನ್ನು ಆಯೋಜಿಸುತ್ತಾ ಬರುತ್ತಿದೆ. ಇತ್ತೀಚಿನ ಬ್ಯಾಂಕಿಂಗ್‌ನಲ್ಲಿ ನೀತಿ, ತಾಂತ್ರಿಕತೆ ಬಹಳ ಮುಂದುವರೆದಿದೆ. ಇವತ್ತು ಸಾಕಷ್ಟು ಸಂಘಗಳು, ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳು ಭಾರತದಲ್ಲಿವೆ. ಇವುಗಳ ಜೊತೆ ನಾವು ಪೈಪೋಟಿ ನೀಡಬೇಕಾಗಿದೆ. ಆದ್ದರಿಂದ ಅನುಭವಸ್ಥರಿಂದ, ನುರಿತ ತಜ್ಞರುಗಳಿಂದ ನಾವು ಒಳ್ಳೆಯ ಉಪನ್ಯಾಸಗಳನ್ನು ಪಡೆದುಕೊಂಡು ಅವರು ನೀಡುವ ರಿಜರ್ವ್ ಬ್ಯಾಂಕಿನ ಮಾರ್ಗದರ್ಶನಗಳು, ಡಿಜಿಟಲ್ ಬ್ಯಾಂಕಿಂಗ್ ಮತ್ತು ತಂತ್ರಜ್ಞಾನ, ಸಹಕಾರಿ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿದುಕೊಂಡು ತರಬೇತಿ ಶಿಬಿರವನ್ನು ಯಶಸ್ವಿಗೊಳಿಸೋಣ ಎಂದರು.

ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ







ವೀರಮ್ಮ ಪಿ. ರವರು ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಜ್ಞಾನಮಟ್ಟವನ್ನು ಹೆಚ್ಚಿಸಲಿಕ್ಕೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುತ್ತದೆ. ಪ್ರತಿ ತಿಂಗಳಿಗೊಮ್ಮೆ ತರಬೇತಿ ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರ ನಿರ್ದೇಶನದ ಅನ್ವಯ ಮಹಾಮಂಡಳ ಆಯೋಜಿಸುತ್ತಾ ಬಂದಿದೆ.

ನಮ್ಮೆಲ್ಲರ ಕೋರಿಕೆಯ ಮೇರೆಗೆ ಇವತ್ತು ಶಿವಮೊಗ್ಗದಲ್ಲಿ ಈ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಇಂತಹ ತರಬೇತಿ ಶಿಬಿರಗಳು ಅನುಕೂಲವಾಗುತ್ತವೆ ಎಂದರು.

2ನೇ ಪುಟಕ್ಕೆ...



3 ಆರ್‌ಬಿಐ ಹೊಸ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಆರ್. ಲಕ್ಷ್ಮೀಕಾಂತ್‌ರಾವ್ ನೇಮಕ

6 ಎಮ್.ಸಿ.ಸಿ. ಬ್ಯಾಂಕ್ 2023-24 ವಿತ್ತೀಯ ವರ್ಷದಲ್ಲಿ 13.12 ಕೋಟಿ ಲಾಭ

7 ಭಾರತದ ರಫ್ತು ಏರಿಕೆ : 19.1 ಬಿಲಿಯನ್ ಡಾಲರ್ ನಷ್ಟು ವ್ಯಾಪಾರದ ಕೊರತೆ

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...

# ಬುದ್ಧ ಬೋಧನೆಯ ಬೆಳಕು ನಮ್ಮ ಅಂತರಂಗ ಬೆಳಗಲಿ

ಭಗವಾನ್ ಬುದ್ಧ ಎಂದರೆ, ಅಂತರಂಗದ ಬೆಳಕು. ಜಗತ್ತಿಗೇ ಈ ಬೆಳಕಿನ ಹಿರಿಮೆಯನ್ನು ತೋರಿಸಿದ ಮಹಾನ್ ಆಧ್ಯಾತ್ಮಿಕ ಚಿಂತಕ ಹಾಗೂ ದಾರ್ಶನಿಕ ಹಾಗೂ ಗುರು ಗೌತಮ ಬೌದ್ಧ. ಮುಂದೆ ಆತ ನಡೆದ ಹಾದಿಯೇ ಬೌದ್ಧ ಧರ್ಮ ಎಂದು ಹೆಸರಾಯಿತು, ವಿಶ್ವದಾದ್ಯಂತ ಬೌದ್ಧ ಧರ್ಮದ ಬೆಳಕು ಪಸರಿಸಿತು.

ಬುದ್ಧ ತಾನು ಬೋಧಿಸುತ್ತಿರುವುದರಲ್ಲಿ ಹೊಸದೇನೂ ಇಲ್ಲವೆಂದೂ ಹಾಗೂ ಈ ಸತ್ಯವನ್ನು ಕಂಡುಕೊಂಡವರಲ್ಲಿ ತಾನು ಮೊದಲನೆಯವರೂ ಅಲ್ಲ, ಕೊನೆಯವನೂ ಅಲ್ಲವೆಂದು ಹೇಳಿದ ಮೊದಲಿಗ!

ಬುದ್ಧ ತನ್ನ ಉಪದೇಶಗಳಲ್ಲಿ ವರ್ತಮಾನ ಕಾಲದ ಬಗ್ಗೆ ಹೇಳುತ್ತಾನೆ; ಭೂತ ಮತ್ತು ಭವಿಷ್ಯತ್ ಕಾಲಗಳ ಬಗ್ಗೆ ಯಾರು ಚಿಂತಿಸದೆ ವರ್ತಮಾನದಲ್ಲಿ ಸಂತೃಪ್ತಿಯ ಮನೋಭಾವದಿಂದ ಇರುತ್ತಾರೋ ಅವರು ಜಗತ್ತಿನಲ್ಲೇ ಅತೀ ಸುಖೀ ಎನ್ನುತ್ತಾನೆ.

ಬುದ್ಧ ಹೇಳುತ್ತಾನೆ; ನಾವು ನಮ್ಮ ಒಳಮನಸ್ಸನ್ನು ಮೊದಲು ಅವಲೋಕಿಸಿಕೊಳ್ಳುವುದನ್ನು ಕಲಿಯಬೇಕಿದೆ. ಅಲ್ಲಿ ಇರುವುದೇ ನಿಜವಾದ ಐಶ್ವರ್ಯವೇ ಹೊರತು ಹೊರಗೆ ಜಗತ್ತಿನಲ್ಲಿ ಕಾಣುವುದಲ್ಲ. ನಮಗೇ ಹೊರ ಜಗತ್ತಿನಲ್ಲಿ ಎಷ್ಟೇ ಐಶ್ವರ್ಯ ಇದ್ದರೂ, ಮನಸ್ಸಿಗೆ ಶಾಂತಿ, ಸುಖ ಸಿಗುವುದು ಒಳಮನಸ್ಸಿನಲ್ಲಿ ಸಂತೋಷ ಉಂಟಾದಾಗ ಮಾತ್ರ. ಎಂಥ ಅರ್ಥಪೂರ್ಣವಾದ ಭೋದನೆಯಿದು.

ಈ ಭೂವಿಯ ಮೇಲಿನ ಪ್ರತಿಯೊಂದು ಜೀವಿಯೂ ಪರಸ್ಪರ ಸಂಪರ್ಕದ ಸಂಕೋಲೆಯಲ್ಲಿ ಇದೆ, ಅದು ನಿಸರ್ಗ ನಿಯಮವಾಗಿದೆ. ಎಲ್ಲ ಜೀವ ಇರುವ ಹಾಗೂ ನಿರ್ಜೀವ ವಸ್ತುಗಳೂ ಪರಸ್ಪರ ಒಂದನ್ನೊಂದು ಅವಲಂಬಿಸಿವೆ. ಯಾವುದೊಂದರ ಸಹಕಾರವಿಲ್ಲದೆ ಯಾರೂ ಬದುಕಲು ಸಾಧ್ಯವಿಲ್ಲ. ಇತ್ತೀಚೀನ ದಿನಗಳಲ್ಲಿ ಮನುಷ್ಯ ತನ್ನ ಸ್ವಾರ್ಥವನ್ನು ಯಾವುದೇ ಮಿತಿಯಿಲ್ಲದೇ ಬೆಳಸಿಕೊಳ್ಳುತ್ತಿದ್ದಾನೆ. ಈ ಭೂಮಿಯ ಮೇಲಿನ ಪ್ರತಿಯೊಂದು ತನಗೇ ಸೇರಿದ್ದು, ತನ್ನ ಸುಖಕ್ಕಾಗಿ ಇದೆ ಎಂಬಂತೆ ವರ್ತಿಸುತ್ತಿದ್ದಾನೆ. ಇದರಿಂದಾಗಿಯೇ ಪ್ರಸ್ತುತ ಜಗತ್ತು ಗಂಡಾಂತರದ ಗೂಡಾಗಿದೆ.

ಬುದ್ಧನನ್ನು ಚೆನ್ನಾಗಿ ಅರಿತ್ತಿದ್ದ ನಮ್ಮ ಕಾಲದ ಶ್ರೇಷ್ಠ ಕವಿ ಕುವೆಂಪು ಅವರು "ಹೇ ಪುಣ್ಯಮೂರ್ತಿ ಮತದ ಹೆಸರಿನಲ್ಲಿ ನಿಸ್ತೇಜಗೊಳಿಸುವ ಮತಿಹೀನತೆಯು ಸಾಕು. ಮನುಷ್ಯನಿಗೆ ಅಗತ್ಯವಿರುವುದು ಸನ್ಮತಿಯ ನಾಗರಿಕತೆಯು." ಇದರರ್ಥ; ದೇಶಕ್ಕೆ ಇಂದು ಅಗತ್ಯವಿರುವುದು ಜ್ಞಾನದ, ವಿಜ್ಞಾನದ, ವೈಚಾರಿಕತೆಯ ನಾಗರೀಕ ಸಮಾಜ. ಈ ವಾಸ್ತವ ಅರಿತು ಸಾಗಿದರೆ, ಇಂದಿನ ಮತೀಯ ಅಂಧಕಾರದದಲ್ಲಿ ಮುಳುಗಿರುವ ದೇಶಕ್ಕೆ ಹೊಸ ಮಾರ್ಗ ಕಾಣಲಿದೆಯಲ್ಲವೆ...

ಬುದ್ಧನ ಬೋಧನೆಗಳ ಬೆಳಕಿನಲ್ಲಿ ಅರಿತು ನಡೆಯಬೇಕಿದೆ. ಜಗತ್ತು ಇರುವುದು ಎಲ್ಲರಿಗಾಗಿ, ಎಲ್ಲ ಖಗ, ಮೃಗ, ಕ್ರಿಮಿ, ಕೀಟಗಳಿಗಾಗಿ ಎಂದು ಅರಿತು ಸಹ ಬಾಳ್ವೇ ಮಾಡಬೇಕಿದೆ. ಜೀವನದಲ್ಲಿ ಕತ್ತಲಾವರಿಸಿದಾಗ ಬುದ್ಧನ ಬೋಧನೆಗಳು ಬೆಳಕು ತೋರುತ್ತವೆ.

ಕಷ್ಟ, ನಷ್ಟಗಳಿಗೆ ತುತ್ತಾದಾಗ ಬುದ್ಧನ ಮಾತುಗಳು ಸಂಜೀವಿನಿಯಂತೆ ಬದುಕಿನ ಬೆಳಕು ತೋರುತ್ತವೆ. ಬುದ್ಧ ತನ್ನ ಬೋಧನೆಗಳಲ್ಲಿ ಒಬ್ಬರು ಮತ್ತೊಬ್ಬರೊಂದಿಗೆ ಪರಸ್ಪರ ಕೈ ಜೋಡಿಸಿ ಸುಖ ಶಾಂತಿಯಿಂದ ಬಾಳುವುದರ ಕುರಿತು ಹೇಳುತ್ತಾನೆ. ಅದೇ ನಮ್ಮ ಸಹಕಾರ ತತ್ತ್ವವಲ್ಲವೇ.

▶▶ ಸಂಪಾದಕರು

...1ನೇ ಪುಟಕ್ಕೆ

ಮಹಾಮಂಡಳದ ಮಾಜಿ ನಿರ್ದೇಶಕರಾದ ಶ್ರೀ ಎಸ್.ಪಿ. ಶೇಷಾದ್ರಿರವರು ಮಾತನಾಡಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಪ್ರತಿ ತಿಂಗಳಿಗೊಂದು ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ಹಮ್ಮಿಕೊಂಡು ಪಟ್ಟಣ ಸಹಕಾರ ಬ್ಯಾಂಕುಗಳ ಏಳಿಗೆಗೆ ಶ್ರಮಿಸುತ್ತಿರುವುದು ಶ್ಲಾಘನೀಯವಾಗಿದೆ. ಇವತ್ತಿನ ದಿವಸ ಬಹಳಷ್ಟು ಬದಲಾವಣೆಗಳು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬರುತ್ತಿವೆ.

ಬ್ಯಾಂಕಿನ ಆಡಳಿತ ಮಂಡಳಿ, ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿಗಳು ಬ್ಯಾಂಕಿನ ಆಧಾರ ಸ್ಥಂಬಗಳು, ಆಡಳಿತ ಮಂಡಳಿಯ ವೃತ್ತಿಪರತೆ ಮತ್ತು ಸಿಬ್ಬಂದಿ ವರ್ಗದ ವೃತ್ತಿಪರತೆ ಹೆಚ್ಚಿಸಲು ತರಬೇತಿ ಶಿಬಿರಗಳು ಉಪಯುಕ್ತವಾಗುತ್ತವೆ. ಇಂತಹ ತರಬೇತಿ ಶಿಬಿರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಭಾಗವಹಿಸಿ, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.

ಈ ತರಬೇತಿ ಶಿಬಿರದಲ್ಲಿ ಇತ್ತೀಚಿನ ಆರ್‌ಬಿಐ ಮಾರ್ಗಸೂಚಿಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಕ್ರೆಡಿಟ್ ಮ್ಯಾನೇಜ್‌ಮೆಂಟ್ ಕುರಿತು ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್ ರವರು, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೂಡಿಕೆ / ನಿಧಿಗಳ ನಿರ್ವಹಣೆ ಕುರಿತು ನೈಟ್ ಫಿನ ಟೆಕ್ ರಿಸರ್ಚ್ ಪ್ರೈವೇಟ್ ಲಿ., ಟ್ರಸರಿ ಹೆಡ್, ಶ್ರೀ ಪವನ ಸೋಮನಿ CA, ರವರು, ಡಿಜಿಟಲ್ ಬ್ಯಾಂಕಿಂಗ್ ಮತ್ತು ತಂತ್ರಜ್ಞಾನ ಕುರಿತು ಅನುಂತಾ ಟೆಕ್ನಾಲಜಿ ಮ್ಯಾನೇಜ್‌ಮೆಂಟ್ ಸರ್ವಿಸ್ ಲಿ.,ನ, ಕ್ಲೌಡ್ ಸೇಲ್ಸ್ ಸೌಥ್‌ನ ಜನರಲ್ ಮ್ಯಾನೇಜರ್ ಶ್ರೀ ಶಶಿಧರ ರವರು ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ತರಬೇತಿ ಶಿಬಿರಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು.

ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 125ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ತರಬೇತಿ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು.

## ಆರ್‌ಬಿಐ ಹೊಸ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಆರ್. ಲಕ್ಷ್ಮೀಕಾಂತ್‌ರಾವ್ ನೇಮಕ




ಭಾರತೀಯ ರಿಸರ್ವ್ ಬ್ಯಾಂಕ್ **(RBI)** ಕಾರ್ಯನಿರ್ವಾಹಕ ನಿರ್ದೇಶಕರಾಗಿ (ED) ಆರ್ ಲಕ್ಷ್ಮೀಕಾಂತ್ ರಾವ್ ರವರನ್ನು ನೇಮಕ ಮಾಡಿದೆ. ಕಾರ್ಯನಿರ್ವಾಹಕ ನಿರ್ದೇಶಕರಾಗಿ ಬಡ್ತಿ ಪಡೆಯುವ ಮೊದಲು, ರಾವ್ ಅವರು ನಿಯಂತ್ರಣ ಇಲಾಖೆಯಲ್ಲಿ ಮುಖ್ಯ ಜನರಲ್ ಮ್ಯಾನೇಜರ್ – ಇನ್ – ಚಾರ್ಜ್ ಆಗಿ ಸೇವೆ ಸಲ್ಲಿಸಿದರು.

ರಾವ್ ಅವರು ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳ ನಿಯಂತ್ರಣ, ಬ್ಯಾಂಕ್‌ಗಳ ಮೇಲ್ವಿಚಾರಣೆ ಮತ್ತು ಗ್ರಾಹಕರ ರಕ್ಷಣೆಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ರಿಸರ್ವ್ ಬ್ಯಾಂಕ್‌ನಲ್ಲಿ ಮೂರು ದಶಕಗಳಿಗೂ ಹೆಚ್ಚು ಅನುಭವವನ್ನು ಹೊಂದಿದ್ದಾರೆ. ರಾವ್ ಅವರು ಆರ್‌ಬಿಐ ಚೆನ್ನೈನಲ್ಲಿ ಬ್ಯಾಂಕಿಂಗ್ ಒಂಬುಡ್ಸ್‌ಮನ್ ಆಗಿ ಮತ್ತು ಲಕ್ನೋದಲ್ಲಿ ಉತ್ತರ ಪ್ರದೇಶದ ಪ್ರಾದೇಶಿಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು. ಅವರು ಹಲವಾರು ಸಮಿತಿಗಳು ಮತ್ತು ಕಾರ್ಯ ಗುಂಪುಗಳ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ ಮತ್ತು ನೀತಿ ನಿರೂಪಣೆಗೆ ಕೊಡುಗೆ ನೀಡಿದ್ದಾರೆ. ಕಾರ್ಯನಿರ್ವಾಹಕ ನಿರ್ದೇಶಕರಾಗಿ, ರಾವ್ ಅವರು ಠೇವಣಿ ವಿಮೆ ಮತ್ತು ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್, ಮಾಹಿತಿ ಹಕ್ಕು ಕಾಯ್ದೆ (FAA), ಸಂವಹನ ಇಲಾಖೆಯನ್ನು ನೋಡಿಕೊಳ್ಳುತ್ತಾರೆ.

## ಪ್ರಗತಿಯತ್ತ ಜನತಾ ಕೋ–ಆಪರೇಟಿವ್ ಬ್ಯಾಂಕ್



**ಬೆಂಗಳೂರು :** ನಗರದ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ 2023–24ನೇ ಸಾಲಿನ ಆರ್ಥಿಕ ವರ್ಷದಲ್ಲಿ 12.83 ಕೋಟಿ ರೂ. ಲಾಭ ಗಳಿಸುವ ಮೂಲಕ ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಸಿ.ಎಲ್. ಮರಿಗೌಡ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಏಳು ಶಾಖೆಗಳನ್ನು ಹೊಂದಿರುವ ಬ್ಯಾಂಕ್ ಕೋವಿಡ್ ಮತ್ತು ಇನ್ನಿತರೆ ಕಾರಣಗಳಿಂದ ಕಳೆದ 3 ವರ್ಷಗಳಿಂದ 8.34 ಕೋಟಿ ರೂ. ಕ್ರೋಢೀಕೃತ ನಷ್ಟ ಅನುಭವಿಸಿತ್ತು. 2024ರ ಮಾರ್ಚ್ 31ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ ಆದಾಯ ತೆರಿಗೆ ಮತ್ತು ಇನ್ನಿತರೆ ಹೊಂದಾಣಿಕೆಗೂ ಮುನ್ನ 12.83 ಕೋಟಿ ರೂ. ಲಾಭ ಗಳಿಸಿದೆ. ಈ ಲಾಭ ಹಿಂದಿನ ಸಾಲಿಗೆ ಹೋಲಿಸಿದರೆ ಶೇ.25.3 ರಷ್ಟು ವೃದ್ಧಿಯಾಗಿದೆ," ಎಂದು ತಿಳಿಸಿದರು.

2022–23ನೇ ಸಾಲಿನಲ್ಲಿದ್ದ ಶೇ.6.49ರಷ್ಟಿದ್ದ ನಿವ್ವಳ ಅನುತ್ಪಾದಕ ಸಾಲಗಳ ಪ್ರಮಾಣವು 2023–24ನೇ ಸಾಲಿನ ಅಂತ್ಯಕ್ಕೆ ಶೇ.1.71ಕ್ಕೆ ಇಳಿಕೆಯಾಗಿರುವುದು ಬ್ಯಾಂಕ್‌ನ ಆರ್ಥಿಕ ಸದೃಢತೆಗೆ ಬಹುಮುಖ್ಯ ಕಾರಣವಾಗಿದೆ.

ಬ್ಯಾಂಕ್ 2024ರ ಮಾರ್ಚ್ 31ಕ್ಕೆ 24,089 ಸದಸ್ಯರನ್ನು ಹೊಂದಿದ್ದು, 33 ಕೋಟಿ ರೂ. ಷೇರು ಬಂಡವಾಳ ಹೊಂದಿದೆ. ಆಡಳಿತ ಮಂಡಳಿಯ ದೂರದೃಷ್ಟಿ ಫಲವಾಗಿ ಬ್ಯಾಂಕಿನ ಸ್ವಂತ ಬಂಡವಾಳ ಮತ್ತು ಇತರೆ ಅವಕಾಶಗಳು ವೃದ್ಧಿಯಾಗಿ 2020ರಲ್ಲಿದ್ದ 89.38 ಕೋಟಿ ರೂ. ಸ್ವಂತ ಬಂಡವಾಳ ಮತ್ತು ಇತರೆ ಅವಕಾಶಗಳು 2024ರ ಮಾರ್ಚ್ 31ಕ್ಕೆ ಶೇ.65ರಷ್ಟು ಅಂದರೆ 147.68 ಕೋಟಿ ರೂ.ಗೆ ಏರಿಕೆಯಾಗಿದೆ ಎಂದರು. ಉಪಾಧ್ಯಕ್ಷ ಬಿ. ಅರವಿಂದ್, ಮುಖ್ಯಕಾರ್ಯ ನಿರ್ವಹಣಾಧಿಕಾರಿ (ಪ್ರಭಾರ) ವಿನೋದ ಶಿವರಾಮಯ್ಯ ಇದ್ದರು.

## ದಿ ಹುಬ್ಬಳ್ಳಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ವರ್ಷದ ಅತ್ಯುತ್ತಮ ಪ್ರಶಸ್ತಿ





ಪುಣೆಯಲ್ಲಿ ಜರುಗಿದ 8ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮೇಳನದಲ್ಲಿ ದಿ ಹುಬ್ಬಳ್ಳಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ವರ್ಷದ ಅತ್ಯುತ್ತಮ ಬ್ಯಾಂಕು ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪಂಚಾಕ್ಷರಿ ಬಿ. ಮಠಪತಿರವರಿಗೆ ಅತ್ಯುತ್ತಮ ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರಶಸ್ತಿಯನ್ನು ಎನ್.ಯು.ಸಿ.ಎಫ್.ಡಿ.ಸಿ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ ರವರು ನೀಡಿದರು.

ಈ ಸಮಾರಂಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಕ್ರಮ ಸಿರೂರ, ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಶಾಂತರಾಜ ಪೋಳ, ಶ್ರೀ ಆನಂದ ಮನಗೋಳಿ ಮತ್ತು ಶ್ರೀ ಗಿರೀಶ ಉಪಾಧ್ಯಾಯ ಇವರು ಪಾಲ್ಗೊಂಡಿದ್ದರು. ದೇಶದ ಅನೇಕ ಸಹಕಾರ ಬ್ಯಾಂಕುಗಳ ನಿರ್ದೇಶಕ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಹಿರಿಯ ಅಧಿಕಾರಿಗಳು ಹಾಗೂ ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಸತೀಶ ಮರಾಠೆ ರವರು ಉಪಸ್ಥಿತರಿದ್ದರು.

## ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕಿನ ಕಿರೀಟಕ್ಕೆ ಮತ್ತೊಂದು ಗರಿ



ಪುಣೆಯ ವೆಸ್ಟೆನ್ ಹೋಟೆಲಿನಲ್ಲಿ ದಿನಾಂಕ 08.05.2024ರಂದು ನಡೆದ 8ನೇ ಆಲ್ ಇಂಡಿಯಾ ಅರ್ಬನ್ ಕೋ – ಆಪರೇಟಿವ್ ಬ್ಯಾಂಕ್ಸ್ ಸಮ್ಮಿತ್–2024 ಕಾರ್ಯಕ್ರಮದಲ್ಲಿ ಮೈಸೂರಿನ ಪ್ರತಿಷ್ಠಿತ ಕೋ ಆಪರೇಟಿವ್ ಬ್ಯಾಂಕುಗಳಲ್ಲಿ ಒಂದಾದ ಶ್ರೀಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕಿಗೆ ಬೆಸ್ಟ್ ಡೇಟಾ ಸೆಂಟರ್ ಇಂಪ್ಲಿಮೆಂಟೇಶನ್ ವಿಭಾಗದಲ್ಲಿ 8ನೇ ಆಲ್ ಇಂಡಿಯಾ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಅವಾರ್ಡ್–2024 ಅನ್ನು ನ್ಯಾಷನಲ್ ಅರ್ಬನ್ ಕೋ-ಆಪರೇಟಿವ್ ಫೈನಾನ್ಸ್ ಅಂಡ್ ಡೆವಲಪ್ಮೆಂಟ್ ಕಾರ್ಪೋರೇಶನ್ ಲಿಮಿಟೆಡ್‌ನ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ ರವರು ನೀಡಿದರು.

ಅವಾರ್ಡ್ ಅನ್ನು ಬ್ಯಾಂಕಿನ ಪರವಾಗಿ ಅಧ್ಯಕ್ಷರಾದ ಶ್ರೀ ಎಚ್. ಎಂ. ಸಂದೀಪ್ ರವರು ಬ್ಯಾಂಕಿನ ವ್ಯವಸ್ಥಾಪನ ಮಂಡಳಿ ಛೇರ್ಮನ್ ಶ್ರೀ ಈ. ದಿಲೀಪ್ ಕುಮಾರ್ ನಿರ್ದೇಶಕರಾದ ಶ್ರೀ ಎಸ್. ಆರ್. ಸುನಿಲ್, ವೃತ್ತಿಪರ ನಿರ್ದೇಶಕರಾದ ಶ್ರೀ ಫಣಿದತ್ತ, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವೈ.ಪಿ. ನರೇಶ್ ಹಾಗೂ ಐಟಿ ಅಡ್ಮಿನ್ ಶ್ರೀ ಲಕ್ಷ್ಮಿಕಾಂತ್‌ರವರು ಪಡೆದುಕೊಂಡರು.

ಶ್ರೀ ಕನ್ಯಕಾಪರಮೇಶ್ವರಿ ಕೋ – ಆಪರೇಟಿವ್ ಬ್ಯಾಂಕ್ ಮೈಸೂರಿನಲ್ಲಿ ತನ್ನದೇ ಆದ ಡೇಟಾ ಸೆಂಟರನ್ನು ಅನುಷ್ಠಾನಗೊಳಿಸಿರುವ ಮೈಸೂರು ಜಿಲ್ಲೆಯ ಏಕೈಕ ಕೋ – ಆಪರೇಟಿವ್ ಬ್ಯಾಂಕ್ ಆಗಿದ್ದು ಐಟಿ ಹಾಗೂ ಅತ್ಯಾಧುನಿಕ ತಂತ್ರಜ್ಞಾನವನ್ನು ಕಾರ್ಯಗತಗೊಳಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿರುತ್ತದೆ. ಇದಲ್ಲದೆ ಈ ಬ್ಯಾಂಕ್ ತನ್ನದೇ ಆದ ಡೆಟಾ ಡಿಸಾಸ್ಟರ್ ರಿಕವರಿ ಸೆಂಟರ್ ಸಹ ಅನುಷ್ಠಾನಗೊಳಿಸಿರುತ್ತದೆ.

## ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ್‌ಗೆ ರಾಷ್ಟ್ರಮಟ್ಟದ ಅತ್ಯುತ್ತಮ ಮಹಿಳಾ ಬ್ಯಾಂಕ್ ಪ್ರಶಸ್ತಿ ಗರಿ



"8ನೇ ಆಲ್ ಇಂಡಿಯಾ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಅವಾರ್ಡ್–2024" ಪುಣೆಯಲ್ಲಿ ಜರುಗಿದ ಸಮಾರಂಭದಲ್ಲಿ ಬೆಳಗಾವಿಯ ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ್‌ಗೆ 'ಬೆಸ್ಟ್ ಮಹಿಳಾ ಕೋ–ಆಪರೇಟಿವ್ ಬ್ಯಾಂಕ್' ಪ್ರಶಸ್ತಿಯನ್ನು ನೀಡಿ ಅಭಿನಂದಿಸಿದೆ.

ಕಳೆದ ಇಪ್ಪತ್ತೇಳು ವರ್ಷಗಳಿಂದ ರಾಣಿ ಚೆನ್ನಮ್ಮ ಮಹಿಳಾ ಸಹಕಾರಿ ಬ್ಯಾಂಕ್ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುತ್ತಾ ಬಂದಿದೆ. ಮಹಿಳಾ ಬ್ಯಾಂಕ್‌ನ ವಿಶ್ವಾಸಾರ್ಹತೆ ಹಾಗೂ ರಚನಾತ್ಮಕವಾದ ಕೆಲಸಗಳನ್ನು ಅವಲೋಕಿಸಿ ಈ ಪ್ರಶಸ್ತಿಯನ್ನು ಅರ್ಪಿಸಿದೆ.

8ನೇ ಮೇ 2024ರಂದು ಪುಣೆಯಲ್ಲಿ ಜರುಗಿದ ಅದ್ದೂರಿ ಸಮಾರಂಭದಲ್ಲಿ ಅಂಬ್ರೆಲಾ ಅರ್ಗನೈಜೇಷನ್ ಚೇರಮನ್ ಮತ್ತು ನ್ಯಾಫಕಬ್‌ನ ನಿರ್ದೇಶಕರಾದ ಶ್ರೀ ಜ್ಯೋತೀಂದ್ರ ಮೆಹತಾ ಮತ್ತು ಕ್ರೈಸ್ಟ್ ಇನ್ಫೋಮೀಡಿಯಾ ಸಂಸ್ಥಾಪಕರು ಹಾಗೂ ಸಿಇಓ ಶ್ರೀ ಗೌತಮ ನವೀನ ಅವರು ರಾಣಿ ಚೆನ್ನಮ್ಮ ಮಹಿಳಾ ಬ್ಯಾಂಕಿನ ಅಧ್ಯಕ್ಷೆ ಡಾ. ಪ್ರೀತಿ ದೊಡವಾಡ ಅವರಿಗೆ ಪ್ರಶಸ್ತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷೆ ರೂಪಾ ಮುನವಳ್ಳಿ, ನಿರ್ದೇಶಕರಾದ ಆಶಾ ಪ್ರಭಾಕರ ಕೋರೆ, ಕೀರ್ತಿ ಮೆಟಗುಡ್ ಅವರು ಉಪಸ್ಥಿತರಿದ್ದರು. ಮಹಿಳಾ ಬ್ಯಾಂಕಿಗೆ ಬಂದಿರುವ ರಾಷ್ಟ್ರಮಟ್ಟದ ಪ್ರಶಸ್ತಿಗೆ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರ ಕೋರೆ ಹರ್ಷವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕಿಗೆ ಅತ್ಯುತ್ತಮ ಬ್ಯಾಂಕ್ ಪ್ರಶಸ್ತಿ



2023–24ನೇ ಸಾಲಿಗೆ ಪುಣೆಯಲ್ಲಿ ನಡೆದ All India Urban Co-operative Banking Award-2024ರ ಸಮಾರಂಭದಲ್ಲಿ ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕಿಗೆ ಸತತವಾಗಿ ಎರಡನೇ ಬಾರಿಗೆ ಅತ್ಯುತ್ತಮ ಕೋ–ಆಪರೇಟಿವ್ ಬ್ಯಾಂಕ್ ಎಂಬ ಪ್ರಶಸ್ತಿ ಲಭ್ಯವಾಗಿರುತ್ತದೆ. ಈ ಸಮಾರಂಭದಲ್ಲಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ನಾಗಮಾದಯ್ಯ, ಶ್ರೀ ಅಶ್ವತ್ಥನಾರಾಯಣ ಗೌಡ ಟಿ.ಕೆ. ಹಾಗೂ ಶ್ರೀ ಎಂ.ಎನ್. ಕಂಬೇಗೌಡ ರವರುಗಳು ಪಾಲ್ಗೊಂಡಿದ್ದರು.

## ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್. ಜಯಪ್ರಕಾಶ್ ಕೆದ್ಲಾಯರವರಿಗೆ ರಾಷ್ಟ್ರೀಯ ಪ್ರಶಸ್ತಿ



ದಿನಾಂಕ : 08–05–2024ರಂದು ಪುಣೆಯಲ್ಲಿ ಜರಗಿದ 8ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮಿತ್–2024ರಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯ ರವರಿಗೆ 2023–24ನೇ ಸಾಲಿನ ಪಟ್ಟಣ ಸಹಕಾರ ಬ್ಯಾಂಕುಗಳ "Best Chairperson of the Year" ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿ ಸಮಾರಂಭವನ್ನು RBI ನಿರ್ದೇಶಕರಾದ ಶ್ರೀ ಸತೀಶ್ ಮರಾಠೆ ಉದ್ಘಾಟಿಸಿದರು. NAFCUB ಅಧ್ಯಕ್ಷರಾದ ಲಕ್ಷ್ಮೀದಾಸ್, NUCFDC ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ, B2B ಸಹ ಸ್ಥಾಪಕರು ಹಾಗೂ ನಿರ್ದೇಶಕರಾದ ಶ್ರೀ ಗೌತಮ್ ನವೀನ್, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೆರೂರೆ, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯ ಉಪಸ್ಥಿತರಿದ್ದರು.

## ಎಮ್.ಸಿ.ಸಿ. ಬ್ಯಾಂಕ್ 2023-24 ವಿತ್ತೀಯ ವರ್ಷದಲ್ಲಿ 13.12 ಕೋಟಿ ಲಾಭ




ಕರ್ನಾಟಕದ ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ 112 ವರ್ಷಗಳ ಇತಿಹಾಸವಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ ಎಮ್.ಸಿ.ಸಿ ಬ್ಯಾಂಕ್ ಲಿಮಿಟೆಡ್ 31 ಮಾರ್ಚ್ 2024 ರಂದು ಮುಕ್ತಾಯಗೊಂಡ ವಿತ್ತೀಯ ವರ್ಷದಲ್ಲಿ ಲೆಕ್ಕ ಪರಿಶೋಧನಾ ಪೂರ್ವ 13.12 ಕೋಟಿ ರೂಪಾಯಿ ವ್ಯವಹಾರಿಕ ಲಾಭಗಳಿಕೆಯನ್ನು ದಾಖಲಿಸಿದೆ. ಸತತವಾಗಿ ಎನ್.ಪಿ.ಎ. ಪ್ರಮಾಣವನ್ನು ಕಡಿಮೆ ಗೊಳಿಸಲು ಬ್ಯಾಂಕ್ ಶ್ರಮಿಸುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ಪ್ರಪ್ರಥಮ ಬಾರಿಗೆ 1.12% ಎನ್.ಪಿ.ಎ. ದಾಖಲಿಸಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 17 ಶಾಖೆಗಳನ್ನು ಹೊಂದಿರುವ ಎಮ್.ಸಿ.ಸಿ. ಬ್ಯಾಂಕ್ 2023-24 ವಿತ್ತೀಯ ವರ್ಷದಲ್ಲಿ ದಾಖಲೆಯ ರೂ. 13.12 ಕೋಟಿ ವ್ಯವಹಾರಿಕ ಲಾಭವನ್ನು ಗಳಿಸಿದೆ. 2023-24 ವಿತ್ತೀಯ ವರ್ಷದಲ್ಲಿ ಗಣನೀಯ ಪ್ರಮಾಣದಲ್ಲಿ ಬ್ಯಾಂಕಿನ ವ್ಯವಹಾರ ಪ್ರಗತಿಯನ್ನು ದಾಖಲಿಸಿದ್ದು, ಬ್ಯಾಂಕಿನ ನಿವ್ವಳ ಮೌಲ್ಯ (Net Worth) ರೂ. 62.45 ಕೋಟಿಯಿಂದ ರೂ.76.35 ಕೋಟಿಗೆ ತಲುಪಿದೆ. ಬ್ಯಾಂಕಿನ ವ್ಯವಹಾರ ರೂ. 1081 ಕೋಟಿ ದಾಟಿದ್ದು ಕಳೆದ ವರ್ಷಕ್ಕಿಂತ ಶೇ.16 ಏರಿಕೆಯಾಗಿದೆ.

ಬ್ಯಾಂಕಿನ ಸದಸ್ಯರು ಬ್ಯಾಂಕಿನ ಪ್ರಸಕ್ತ ಆಡಳಿತ ಮಂಡಳಿಗೆ ನೀಡಿದ ಬೆಂಬಲ, ಗ್ರಾಹಕರ ವಿಶ್ವಾಸ ಮತ್ತು ಅಧಿಕಾರಿವರ್ಗ ಹಾಗೂ ಸಿಬ್ಬಂದಿಯ ಶ್ರಮದಿಂದ ಇದು ಸಾಧ್ಯವಾಗಿದೆ. ಜೊತೆಗೆ ಸಾಕಷ್ಟು ಅನಿವಾಸಿ ಭಾರತೀಯರು ಬ್ಯಾಂಕಿನಲ್ಲಿ ವ್ಯವಹಾರ ಮತ್ತು ಹೂಡಿಕೆಯನ್ನು ಮಾಡಿರುತ್ತಾರೆ. ಈ ಮಾಹಿತಿಯನ್ನು ಬ್ಯಾಂಕಿನ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಅನಿಲ್ ಲೋಬೊ ಇವರು ಇತ್ತೀಚೆಗೆ ಕರೆದ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು. ಜೆರಾಲ್ಡ್ ಜೂಡ್ ಡಿಸಿಲ್ವ - ಉಪಾಧ್ಯಕ್ಷರು, ನಿರ್ದೇಶಕರಾದ - ಆಂಡ್ರ್ಯೂ ಡಿಸೋಜಾ, ಡಾ। ಜೆರಾಲ್ಡ್ ಪಿಂಟೊ, ಅನಿಲ್ ಪತ್ರಾವೊ, ಜೆ.ಪಿ. ರೊಡ್ರಿಗಸ್, ಡೇವಿಡ್ ಡಿಸೋಜಾ, ಎಲ್ರೊಯ್ ಕಿರಣ್ ಕ್ರಾಸ್ಟೊ, ಹೆರಾಲ್ಡ್ ಮೊಂತೆರೊ, ರೋಶನ್ ಡಿಸೋಜಾ, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸಿ.ಜಿ. ಪಿಂಟೊ, ಸುಶಾಂತ್ ಸಲ್ಡಾನ್ಹಾ, ಐರಿನ್ ರೆಬೆಲ್ಲೊ, ಡಾ। ಫ್ರೀಡಾ ಡಿಸೋಜಾ, ಆಲ್ವಿನ್ ಪಿ. ಮೊಂತೆರೊ, ಫೆಲಿಕ್ಸ್ ಡಿ ಕ್ರೂಜ್, ಶರ್ಮಿಳಾ ಮಿನೇಜಸ್ ಹಾಗೂ ಮಹಾ ಪ್ರಬಂಧಕರು - ಸುನಿಲ್ ಮಿನೇಜಸ್ ಉಪಸ್ಥಿತರಿದ್ದರು.

## 10ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ ಬೆಳಗಾವಿ ವಿಭಾಗದ ಅಭ್ಯರ್ಥಿಗಳ ಸಂಪರ್ಕ ತರಗತಿಗಳು ದಿನಾಂಕ : 11.05.2024 ಮತ್ತು 12.05.2024ರಂದು ಜರುಗಿದವು

**ಬೆಳಗಾವಿ :** ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ ಸಂಪರ್ಕ ತರಗತಿಗಳು ದಿನಾಂಕ : 11.05.2024 ಮತ್ತು 12.05.2024ರಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಪ್ರಾಂತೀಯ ಕಛೇರಿ, ಬೆಳಗಾವಿಯಲ್ಲಿ ಜರುಗಿದವು.



## ಶ್ರೀ ವಿಜಯ ಮಹಾಂತೇಶ ಸಹಕಾರಿ ಬ್ಯಾಂಕ ನಿ., ಹುನಗುಂದ : ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ

**ಹುನಗುಂದ :** ಶ್ರೀ ವಿಜಯ ಮಹಾಂತೇಶ ಸಹಕಾರ ಬ್ಯಾಂಕ್ ನಿ., ಹುನಗುಂದ ಇದರ ಬಾಕಿ ಉಳಿದ ಅವಧಿಗೆ ದಿನಾಂಕ : 13.05.2024ರಂದು ಜರುಗಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಶ್ರೀ ಶಿವಾನಂದ ವಿರುಪಾಕ್ಷಪ್ಪ ಕಂಠಿ ಅಧ್ಯಕ್ಷರಾಗಿ ಮತ್ತು ಶ್ರೀಮತಿ ಅನ್ನಪೂರ್ಣ ಶರಣಪ್ಪ ಹೊಸೂರ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ತಿಳಿಸಿರುತ್ತಾರೆ.



## ಭಾರತದ ರಫ್ತು ಏರಿಕೆ : 19.1 ಬಿಲಿಯನ್ ಡಾಲರ್ ನಷ್ಟ ವ್ಯಾಪಾರದ ಕೊರತೆ




**ಮುಂಬೈ :** ಭಾರತದ ಸರಕು ರಫ್ತು ಏಪ್ರಿಲ್ ತಿಂಗಳಲ್ಲಿ 34.99 ಬಿಲಿಯನ್‌ಗೆ ಏರಿಕೆಯಾಗಿದೆ. ವರ್ಷದ ಹಿಂದೆ ಇದೇ ತಿಂಗಳಲ್ಲಿ 34.62 ಬಿಲಿಯನ್ ಡಾಲರ್ ನಷ್ಟಿತ್ತು. ಸರ್ಕಾರ ಇಂದು ಈ ಸಂಬಂಧ ಅಧಿಕೃತ ಅಂಕಿ – ಅಂಶಗಳನ್ನು ಪ್ರಕಟಿಸಿದೆ. ಕೇವಲ ರಫ್ತು ಮಾತ್ರವಲ್ಲದೆ ಆಮದು ಸಹ 54 .09 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. 2023ರ ಏಪ್ರಿಲ್ ತಿಂಗಳಲ್ಲಿ 49.06 ಬಿಲಿಯನ್ ಡಾಲರ್ ನಷ್ಟಿತ್ತು. ಆಮದು ಮತ್ತು ರಫ್ತು ನಡುವಿನ ವ್ಯಾಪಾರದ ಕೊರತೆ 19.1 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಹೊಸ ಆರ್ಥಿಕ ವರ್ಷವು ಉತ್ತಮವಾಗಿ ಪ್ರಾರಂಭವಾಗಿದ್ದು ಅದು ಮುಂದುವರಿಯುತ್ತದೆ ಎಂಬ ನಿರೀಕ್ಷೆ ಇದೆ. ಮಾರ್ಚ್ 2024ರಲ್ಲಿ, ಹೊರಹೋಗುವ ಸಾಗಣೆಗಳು ವರ್ಷದ ಹಿಂದೆ $41.96 ಶತಕೋಟಿಯಿಂದ $41.68 ಶತಕೋಟಿಗೆ ಇಳಿದಿದೆ.



## 2025 ವೇಳೆಗೆ ಭಾರತ 4ನೇ ಅತಿ ದೊಡ್ಡ ಆರ್ಥಿಕತೆ

**ನವದೆಹಲಿ :** ಸ್ಥೂಲ ಆರ್ಥಿಕತೆಯ ಹಲವು ಮಾನದಂಡಗಳನ್ನು ಉಲ್ಲೇಖಿಸಿರುವ ನೀತಿ ಆಯೋಗದ ಸಿಇಒ ಅಮಿತಾಬ್ ಕಾಂತ್ ಭಾರತ 2025ರ ವೇಳೆಗೆ ಜಪಾನ್‌ನ್ನು ಹಿಂದಿಕ್ಕಿ 4ನೇ ಅತಿ ದೊಡ್ಡ ಆರ್ಥಿಕತೆಯಾಗಲಿದೆ ಎಂದು ಹೇಳಿದ್ದಾರೆ. ಭಾರತದ ಜಿಡಿಪಿ ಈಗ 5ನೇ ಶ್ರೇಣಿಯಲ್ಲಿದ್ದು ಅಮೇರಿಕಾ, ಚೀನಾ, ಜರ್ಮನಿ, ಜಪಾನ್ ನಂತರದ ಸ್ಥಾನದಲ್ಲಿದೆ. ಒಂದು ದಶಕದ ಹಿಂದೆ ಭಾರತದ ಜಿಡಿಪಿ 11ನೇ ಸ್ಥಾನದಲ್ಲಿತ್ತು. ಈಗ ಭಾರತದ ಜಿಡಿಪಿ 3.7 ಟ್ರಿಲಿಯನ್ ಡಾಲರ್ ನಷ್ಟಿದೆ. 2022 ರಲ್ಲಿ ಭಾರತ ಬ್ರಿಟನ್‌ನ್ನು ಸರಿಗಟ್ಟಿತ್ತು.

ಅಮಿತಾಬ್ ಕಾಂತ್ ನೀಡಿರುವ ಮಾಹಿತಿಯ ಪ್ರಕಾರ, 2013ರಲ್ಲಿ ದುರ್ಬಲವಾದ 5 ಆರ್ಥಿಕತೆಗಳಲ್ಲಿ ಒಂದಾಗಿದ್ದ ಭಾರತದ ಆರ್ಥಿಕತೆ 2024ರಲ್ಲಿ ಟಾಪ್ 5ಕ್ಕೆ ಏರಿಕೆಯಾಗುವುದಕ್ಕೆ ದಾಖಲೆಯ ಜಿಎಸ್‌ಟಿ ಸಂಗ್ರಹ, ಕಳೆದ 3 ತ್ರೈಮಾಸಿಕಗಳಲ್ಲಿ ಶೇ.8ರಷ್ಟು ಜಿಡಿಪಿ ಬೆಳವಣಿಗೆ, ಹಲವು ರಾಷ್ಟ್ರಗಳೊಂದಿಗೆ ರೂಪಾಯಿ ಮೌಲ್ಯದಲ್ಲಿ ವಹಿವಾಟು ನಡೆಸುತ್ತಿರುವುದು ಹಾಗೂ ಇನ್ನಿತರ ಅಂಶಗಳು ಕಾರಣವಾಗಿದೆ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಪಟ್ಟಣ ಸಹಕಾರ ಬ್ಯಾಂಕಿನ ಸಾಮಾನ್ಯ ಸದಸ್ಯ, ಸಹಸದಸ್ಯ ಮತ್ತು ನಾಮಮಾತ್ರ ಸದಸ್ಯರಿಗೆ ನೀಡಬಹುದಾದ ವಿವಿಧ ಸಾಲಗಳ ಗರಿಷ್ಠ ಮಿತಿ ಏನು?**

▸▸ ಶ್ರೀ ಗಣೇಶ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಕಲ್ಬುರ್ಗಿ.

**ಉತ್ತರ :** ಪಟ್ಟಣ ಸಹಕಾರ ಬ್ಯಾಂಕುಗಳು ಸದಸ್ಯರಿಗೆ ನೀಡುವ ವೈಯಕ್ತಿಕ ಸಾಲಗಳಲ್ಲಿ ಸುರಕ್ಷಿತ ಮತ್ತು ಅಸುರಕ್ಷಿತ ಸಾಲಗಳಿಗೆ ಪ್ರತ್ಯೇಕ ಮಿತಿ ಇರುತ್ತದೆ. ಹಾಗೆಯೇ ಸಾಮಾನ್ಯ ಮತ್ತು ಸಹ ಸದಸ್ಯರಿಗೆ ನೀಡುವ ಸಾಲಗಳ ಮಿತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲ. ನಾಮಮಾತ್ರ ಸದಸ್ಯರಿಗೆ ನೀಡುವ ಸಾಲಕ್ಕೆ ಪ್ರತ್ಯೇಕ ಮಿತಿ ಇದೆ. ಸಾಮಾನ್ಯ ಸದಸ್ಯ ಮತ್ತು ಸಹ ಸದಸ್ಯರಿಗೆ ನೀಡಬಹುದಾದ ವೈಯಕ್ತಿಕ ಸಾಲದ ಮಿತಿ ಈ ಕೆಳಗಿನಂತಿದೆ.

**(i) ಸುರಕ್ಷಿತ ಸಾಲ :** ಬ್ಯಾಂಕಿನ ಟೈಯರ್ 1 ಬಂಡವಾಳದ ಶೇ.15ರಷ್ಟು ಅಥವಾ ಬ್ಯಾಂಕು ನಿರ್ಧರಿಸುವ ಮಿತಿ ಯಾವುದು ಕಡಿಮೆಯೋ ಅದು.

**(ii) ಅಸುರಕ್ಷಿತ ಸಾಲ :** ಬ್ಯಾಂಕಿನ ಬೇಡಿಕೆ ಮತ್ತು ಸಮಯದ ಹೊಣೆಗಾರಿಕೆ (ಡಿ.ಟಿ.ಎಲ್) ಮತ್ತು ಸಿ.ಆರ್.ಎ.ಆರ್. ಪ್ರಮಾಣಕ್ಕೆ ಅನುಗುಣವಾಗಿ ರೂ.25,000 ದಿಂದ ರೂ.5.00ಲಕ್ಷದವರೆಗೆ ಒಬ್ಬ ಸದಸ್ಯನಿಗೆ ಅಸುರಕ್ಷಿತ ಸಾಲ ನೀಡಬಹುದು.

**(iii) ಗೃಹ ನಿರ್ಮಾಣ ಸಾಲ :** ರೂಪಾಯಿ 100 ಕೋಟಿಗಿಂತ ಕಡಿಮೆ ಠೇವಣಿ ಹೊಂದಿರುವ ಬ್ಯಾಂಕುಗಳು ಗರಿಷ್ಠ ರೂ.60ಲಕ್ಷದಷ್ಟು ವೈಯಕ್ತಿಕ ಗೃಹ ಸಾಲವನ್ನು ನೀಡಬಹುದು. ರೂ.100ಕೋಟಿಗಿಂತ ಅಧಿಕ ಠೇವಣಿ ಹೊಂದಿರುವ ಬ್ಯಾಂಕುಗಳ ನೀಡಬಹುದಾದ ಗೃಹನಿರ್ಮಾಣ ಸಾಲದ ವೈಯಕ್ತಿಕ ಮಿತಿ ರೂ.140ಲಕ್ಷ. ಬ್ಯಾಂಕುಗಳು ನೀಡುವ ಗರಿಷ್ಠ ಸಾಲವು ಅವುಗಳ ಟೈಯರ್ 1 ಬಂಡವಾಳದ ಶೇ.15ರಷ್ಟನ್ನು ಮೀರಬಾರದು.

**ನಾಮಮಾತ್ರ ಸದಸ್ಯ :** ರೂಪಾಯಿ 50ಕೋಟಿ ಮತ್ತು ಅದಕ್ಕಿಂತ ಅಧಿಕ ಠೇವಣಿ ಹೊಂದಿರುವ ಪಟ್ಟಣ ಸಹಕಾರಿ ಬ್ಯಾಂಕುಗಳು ಕ್ರಮವಾಗಿ ರೂ.50,000 ಮತ್ತು ರೂ. ಒಂದು ಲಕ್ಷದವರೆಗೆ ನಾಮಮಾತ್ರ ಸದಸ್ಯರಿಗೆ ಸಾಲಗಳನ್ನು ನೀಡಬಹುದಾಗಿದೆ.

**(iv) ಬುಲೆಟ್ ಮರುಪಾವತಿಯ ಚಿನ್ನದ ಸಾಲ :** ತಮ್ಮ ಆದ್ಯತಾ ವಲಯದ ಸಾಲಗಳ ಎಲ್ಲ ಗುರಿಯನ್ನು ಸಾಧಿಸಿದ ಬ್ಯಾಂಕುಗಳು ಮತ್ತು ಗುರಿ ಸಾಧಿಸದ ಬ್ಯಾಂಕುಗಳು ಕ್ರಮವಾಗಿ ರೂ.4.00ಲಕ್ಷ ಮತ್ತು ರೂ.2.00ಲಕ್ಷಗಳವರೆಗೆ ವೈಯಕ್ತಿಕ ಚಿನ್ನದ ಸಾಲಗಳನ್ನು ನೀಡಬಹುದು.

ಸಾಮಾನ್ಯ ಮತ್ತು ಸಹ ಸದಸ್ಯ ಅಸುರಕ್ಷಿತ ಸಾಲಗಳನ್ನು ಸೇರಿ ಎಲ್ಲಾ ತರದ ಸಾಲಗಳನ್ನು ಪಡೆಯಬಹುದು. ಆದರೆ, ಠೇವಣಿ ಮೇಲಿನ ಸಾಲಗಳನ್ನು ಹೊರತುಪಡಿಸಿ ಎಲ್ಲಾ ಸಾಲಗಳ ಒಟ್ಟು ಮೊತ್ತ ಬ್ಯಾಂಕಿನ ಟೈಯರ್ 1 ಬಂಡವಾಳದ ಶೇ.15ರಷ್ಟನ್ನು ಮೀರಬಾರದು.

## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಧಾರವಾಡದ ಬಳಿಯ ಕಲಕೇರಿ ಮಾವು ಬೆಳೆಗಾರ ಪ್ರಮೋದ ಗಾಂವಕರ ತೋಟದಲ್ಲಿ ಬೆಳೆದ ವಿಶ್ವದ ಅತ್ಯಂತ ದುಬಾರಿಯಾದ ಮಿಯಾಜಾಕಿ ಮಾವಿನ ಹಣ್ಣು ಅಲ್ಲಿನ ತೋಟಗಾರಿಕೆ ಇಲಾಖೆಯ ಮಾವುಮೇಳದಲ್ಲಿ ಗಮನ ಸೆಳೆಯುತ್ತಿದ್ದು, ಒಂದು ಹಣ್ಣನ್ನು 10 ಸಾವಿರ ರೂ.ಗಳಿಗೆ ಮಾರಾಟ ಮಾಡಲಾಗಿದೆ. ದುಬಾರಿ ಮಾವಿನ ಹಣ್ಣನ್ನು ಖರೀದಿಸದೇ ಹೋದರೂ ಕಣ್ತುಂಬಿಕೊಳ್ಳಬಹುದಾಗಿದೆ.
- ಜನಾಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಜನಪರ ಹೋರಾಟಗಾರರಾದ 54 ವರ್ಷ ವಯಸ್ಸಿನ ಜಿ. ಸುಧಾ ಮತ್ತು ಮೋಹನ್ ಕುಮಾರ್ ಜೆ. ವಿವಾಹವಾಗಲು ನಿರ್ಧರಿಸಿದ 25 ವರ್ಷಗಳ ನಂತರ ಈಗ ಚಿಕ್ಕಮಗಳೂರು ಜಿಲ್ಲೆಯ ಅಮೃತೇಶ್ವರ ದೇವಸ್ಥಾನದಲ್ಲಿ ಕುವೆಂಪು ಅವರ “ಮಂತ್ರ ಮಾಂಗಲ್ಯ” ವಿಧಿಯಂತೆ ಸರಳ ಸಮಾರಂಭದಲ್ಲಿ ವಿವಾಹವಾದರು.
- ಹುಲಕೋಟಿಯಲ್ಲಿ ಸಂಕೀರ್ಣವಾದ ಶಸ್ತ್ರಚಿಕಿತ್ಸೆಗಳನ್ನೂ ನಡೆಸಬಹುದಾದ ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಮಾಡುವುದು ಸಹಕಾರಿ ಹಾಗೂ ರಾಜಕೀಯ ಧುರೀಣ ಕೆ.ಎಚ್. ಪಾಟೀಲ್ ಅವರ ಕನಸು ಹಾಗೂ ಸಂಕಲ್ಪವಾಗಿತ್ತು. ಏಪ್ರಿಲ್ 24ರಂದು ಇಲ್ಲಿನ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಯೊಂದನ್ನು ಯಶಸ್ವಿಯಾಗಿ ಮಾತ್ರವಲ್ಲ ಅಲ್ಪ ವೆಚ್ಚದಲ್ಲಿ ನಡೆಸಿದ್ದು, ಈ ರೀತಿಯಾಗಿ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆದ ಮೊದಲ ಗ್ರಾಮೀಣ ಆಸ್ಪತ್ರೆ ಇದಾಗಿದೆ ಎಂದು ಇಲ್ಲಿನ ವೈದ್ಯರು ಹೇಳಿದ್ದಾರೆ.
- ಥಲಸ್ಸೆಮಿಯಾ ರೋಗದಿಂದ ಬಳಲುತ್ತಿದ್ದ ಬೆಂಗಳೂರಿನ ಯುವಕ ಚಿರಾಗ್ ಅವರಿಗೆ ಚಿಕಿತ್ಸೆಗಾಗಿ ರಕ್ತದ ಕಾಂಡಕೋಶ ದಾನ ನೀಡಿದ ಜರ್ಮನಿಯ 29 ವರ್ಷದ ರೋಮನ್ ಸಿಮ್ನಿಜ್ಕಿ ಅವರನ್ನು ಚಿರಾಗ್ ಅವರು ಇತ್ತೀಚೆಗೆ ಭೇಟಿಯಾಗಿ, ಕೃತಜ್ಞತೆ ಸಲ್ಲಿಸಿದ್ದಾರೆ.
- ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಒಂದು ಸಣ್ಣ ಹಳ್ಳಿಯ ತಾಯಮ್ಮ ಮೂರ್ತಿ ಅವರ ಮೂರು ಮಕ್ಕಳು ವರ್ಷಗಟ್ಟಲೆ ಜೀತದಾಳುಗಳಾಗಿದ್ದರು. ಈ ಕುಟುಂಬವನ್ನು 2017ರಲ್ಲಿ ನಿರ್ದಯಿ ಮಾಲೀಕರ ಹಿಡಿತದಿಂದ ಮುಕ್ತಗೊಳಿಸಲಾಯಿತು. ನಂತರ ದಾನಿಗಳ ನೆರವಿನಿಂದ ಹೊಲಿಗೆ ಕೆಲಸ ಕಲಿತು ಬದುಕು ನಡೆಸುತ್ತಾ ಇತರ ಅನೇಕ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ.
- ಸಿಂಗಾಪುರದಲ್ಲಿ ಮಹಾಮಾರಿ ಕೊರೊನಾ ಮತ್ತೆ ಆತಂಕ ಸೃಷ್ಟಿಸಿದೆ. ಕೇವಲ ಒಂದು ವಾರದಲ್ಲಿ 26 ಸಾವಿರ ಕೊರೊನಾ ಪ್ರಕರಣಗಳು ದಾಖಲಾಗಿವೆ. ಹೀಗಾಗಿ ಅಲ್ಲಿನ ಆರೋಗ್ಯ ಇಲಾಖೆ ಜನರಿಗೆ ಮಾಸ್ಕ್ ಧರಿಸುವಂತೆ ಆದೇಶ ನೀಡಿದೆ. ಜೊತೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಚಿಕಿತ್ಸೆ ನೀಡಲು ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದೆ.

## ಓದುಗರ ಅನಿಸಿಕೆ...




**ಇಳಿಸಬೇಕಾದ್ದು ನ್ಯಾಯ :** ಮುಂದಿನ ಜೂನ್ ಮೊದಲ ವಾರ ನಡೆಯುವ ಹಣಕಾಸು ಪರಾಮರ್ಶೆ ಸಭೆಯಲ್ಲಾದರೂ ಬಡ್ಡಿ ದರವನ್ನು ಆರ್‌ಬಿಐ ಇಳಿಕೆ ಮಾಡಬಹುದೇ ಎನ್ನುವ ನಿರೀಕ್ಷೆ ಜನಸಾಮಾನ್ಯರಲ್ಲಿದೆ. ಆದರೆ, ಸದ್ಯದ ಬೆಳವಣಿಗೆ ನೋಡಿದರೆ ಬಡ್ಡಿ ದರ ಯಥಾಸ್ಥಿತಿಯಲ್ಲಿ ಮುಂದುವರಿಯುವ ಸಾಧ್ಯತೆ ಇದೆ. ಪ್ರಸ್ತುತ ಸರ್ಕಾರ ಹಣದುಬ್ಬರ ಇಳಿಕೆಯಾಗುತ್ತಿದೆ ಎಂದು ಹೇಳುತ್ತಿರುವಾಗ, ಆರ್‌ಬಿಐ ಬಡ್ಡಿ ದರವನ್ನು ಇಳಿಸಬೇಕಾದ್ದು ನ್ಯಾಯ.

**▸▸ ನಂಜರಾಜಪ್ಪ ವಿ., ತುಮಕೂರು**

**ರೂ. 10ರ ನೋಟಿಗೆ ಪರದಾಟ :** ರಿಸರ್ವ್ ಬ್ಯಾಂಕ್ ರೂ.10 ನೋಟುಗಳ ಮುದ್ರಣದಲ್ಲಿ ಇಳಿಕೆಗೊಳಿಸಿದ ಪರಿಣಾಮ ವ್ಯಾಪಾರಿಗಳು, ಗ್ರಾಹಕರು ಪರದಾಡುವಂತಾಗಿದೆ. ಹಲವಾರು ತಿಂಗಳಿಂದಲೂ ರೂ.10 ನೋಟುಗಳ ಕೊರತೆ ಉಂಟಾಗಿರುವುದರಿಂದ ತರಕಾರಿ ವ್ಯಾಪಾರಸ್ಥರು, ರೈತರು, ಹೋಟೆಲ್ ಗ್ರಾಹಕರು ವ್ಯವಹರಿಸಲು ಪರಿದಾಡುವಂತಾಗಿದೆ. ರಿಸರ್ವ್ ಬ್ಯಾಂಕ್ ಶೀಘ್ರವೇ ರೂ. 10 ನೋಟುಗಳನ್ನು ಮುದ್ರಿಸಲು ಮುಂದಾಗಲಿ.

**▸▸ ಭೀಮಣ್ಣ ನಾಯ್ಕ್, ಅಂಕೋಲ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.